ಕಾತ್ರಿಕೇಹಾಳ್ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳಿಗೆ 15 ಕಿ.ಮೀ. ದೂರದಲ್ಲಿರುವ ತಿಮ್ಮನಹಳ್ಳಿ ಹಾಗೂ 13 ಕಿ.ಮೀ. ದೂರದಲ್ಲಿರುವ ಚಿಕ್ಕನಾಯಕನಹಳ್ಳಿ ವಿದ್ಯುತ್ ಉಪ ಕೇಂದ್ರಗಳಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ವಿದ್ಯುತ್ ಬೇಡಿಕೆಯ ಹೆಚ್ಚಳವನ್ನು ಆಧರಿಸಿ, ಕಾತ್ರಿಕೇಹಾಳ್ ಗ್ರಾಮದಲ್ಲಿ ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಮತ್ತು ಇ)

ದಸೂಡಿ ಗ್ರಾಮದ ವಿದ್ಯುತ್ ಉಪ ಕೇಂದ್ರದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ. ಇದಕ್ಕೆ ಸಂಬಂಧಿಸಿದ 66 ಕೆ.ವಿ. ಪ್ರಸರಣ ಮಾರ್ಗದ ಕಾಮಗಾರಿಗಳಗೂ ಸಹ ಪ್ರಗತಿಯಲ್ಲಿದ್ದು, 123 ವಿದ್ಯುತ್ ಗೋಪುರಗಳ ಪೈಕಿ, 78 ವಿದ್ಯುತ್ ಗೋಪುರಗಳನ್ನು ನಿರ್ಮಾಣ ಮಾಡಲಾಗಿದೆ. ಸದರೀ ಪ್ರಸರಣ ಮಾರ್ಗದ 20 ಸ್ಥಳಗಳಲ್ಲಿ ರೈತರು ವಿದ್ಯುತ್ ಗೋಪುರಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅಡ್ಡಿಪಡಿಸುತ್ತಿದ್ದಾರೆ. ಈ ಪೈಕಿ ಚಿಕ್ಕಲಘಟ್ಟ ಗ್ರಾಮದ ಸರಹದ್ದಿನಲ್ಲಿ ಬರುವ ಲೊಕೇಷನ್ ನಂ.70 ಹಾಗೂ 71 (ಒ.ಎಸ್.ನಂ. 16/2009- ಹಿರಿಯೂರು ಸಿವಿಲ್ ನ್ಯಾಯಾಲಯ) ಮತ್ತು ದಸೂಡಿ ಗ್ರಾಮದ ಸರಹದ್ದಿನಲ್ಲಿ ಬರುವ ಲೊಕೇಷನ್ ನಂ.114 (ಒ.ಎಸ್.ನಂ. 354/2008- ಚಿಕ್ಕನಾಯಕನಹಳ್ಳಿ ಸಿವಿಲ್ ನ್ಯಾಯಾಲಯ) ರಲ್ಲಿ ಭೂ ಮಾಲೀಕರು ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಸದರೀ ಭೂ ಮಾಲೀಕರ ಮನವೊಲಿಸಿ, ಸಮಸ್ಯೆಯನ್ನು ಬಗೆಹರಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಕ್ರಮಗಳನ್ನು ಕೈಗೊಂಡಿದೆ.

168 ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸದರಿ ವರ್ಷ ಉತ್ತಮ ಮಳೆಯಾಗಿದ್ದರೂ ಗ್ರಾಮೀಣದಲ್ಲಿರುವ ಸಾರ್ವಜನಿಕರು ಹಾಗೂ ರೈತರು ವಿದ್ಯುತ್ತಿನ ತೀವ್ರ ಅಭಾವ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದ್ಯ ಗ್ರಾಮೀಣ ಭಾಗದಲ್ಲಿ ಸಿಂಗಲ್ ಫೇಸ್ ಮತ್ತು ಥ್ರೀ ಫೇಸ್ ವಿದ್ಯುತ್ ಸರಬರಾಜು ಮಾಡಲು ಗುಲ್ಬರ್ಗಾ ಜಿಲ್ಲೆಯಲ್ಲಿ ಮತ್ತು ಉಳಿದ ಜಿಲ್ಲೆಗಳಲ್ಲಿ ನಿಗದಿಪಡಿಸಿದ ಸಮಯದ ವಿವರ ನೀಡುವುದು;

ಇ) ಗ್ರಾಮೀಣ ಭಾಗದ ವಿದ್ಯುತ್ ಸುಧಾರಣೆಗಾಗಿ ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು;

ಈ) ಪ್ರತಿ ಗ್ರಾಮಗಳಲ್ಲಿ ಟಿ.ಸಿ.ಗಳ ತೊಂದರೆಯಾಗುತ್ತಿದ್ದು, ಹೆಚ್ಚುವರಿಯಾಗಿ ಹೊಸ ಟಿ.ಸಿ.ಗಳ ಖರೀದಿಗಾಗಿ ಇಲಾಖೆ ತೆಗೆದು ಕೊಳ್ಳುತ್ತಿರುವ ಕ್ರಮವೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಉತ್ತಮ ಮಳೆಯಾಗಿದ್ದು, ರಾಜ್ಯದ ಮೂರು ಪ್ರಮುಖ ಜಲಾಶಯಗಳಾದ ಲಿಂಗನಮಕ್ಕಿ, ಸೂಪಾ ಮತ್ತು ಮಾಣಿ ಜಲಾಶಯಗಳ ಪೈಕಿ ಲಿಂಗನಮಕ್ಕಿ ಜಲಾಶಯ ಮಾತ್ರ ಪೂರ್ಣ ಭರ್ತಿಯಾಗಿತ್ತು. ಉಳಿದ ಸೂಪಾ ಮತ್ತು ಮಾಣಿ ಜಲಾಶಯಗಳು ಕ್ರಮವಾಗಿ ಶೇಕಡ 64 ಮತ್ತು 78 ರಷ್ಟು ಮಾತ್ರ ಭರ್ತಿಯಾಗಿತ್ತು. ಈ 3 ಪ್ರಮುಖ ಜಲಾಶಯಗಳು ಪೂರ್ಣ ಭರ್ತಿಯಾದರೆ, ಒಟ್ಟು 8,689 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಲಭ್ಯವಾಗುತ್ತದೆ. ಆದರೆ, ಪ್ರಸ್ತುತ 2009–10 ರಲ್ಲಿ 7.338 ಮಿಲಿಯನ್ ಯೂನಿಟ್‌ಗಳಷ್ಟು ಮಾತ್ರ ವಿದ್ಯುತ್ ಲಭ್ಯವಾಗುತ್ತಿದೆ. ರಾಜ್ಯಕ್ಕೆ 2009–10ನೇ ಸಾಲಿನಲ್ಲಿ ಒಟ್ಟು 44,550 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ದೊರಕುವ ಅಂದಾಜಿರುತ್ತದೆ. ರಾಜ್ಯದ ಒಟ್ಟು ವಿದ್ಯುತ್ ಲಭ್ಯತೆಯಲ್ಲಿ ಜಲ ವಿದ್ಯುತ್‌ನ ಪ್ರಮಾಣ ಕೇವಲ ಶೇಕಡ 33.8.

ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಮಳೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ, ಪ್ರಸ್ತುತ ಪ್ರತಿನಿತ್ಯ 10 ಮಿಲಿಯನ್ ಯೂನಿಟ್‌ಗಳಷ್ಟು ಹೆಚ್ಚುವರಿ ಜಲ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಜೂನ್ 2010 ರವರೆಗೂ ಈ ಹೆಚ್ಚುವರಿ ಜಲ ವಿದ್ಯುತ್‌ನ್ನು ಉತ್ಪಾದಿಸಲಾಗುವುದು.

ಪ್ರಸಕ್ತ ವರ್ಷವಾದ 2009–10ರಲ್ಲಿ ರಾಜ್ಯದ ಅನುಬಂಧಿತ ವಿದ್ಯುತ್ ಬೇಡಿಕೆ ಸುಮಾರು 51,019 ಮಿಲಿಯನ್ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದ್ದು, ವಿದ್ಯುತ್ ಲಭ್ಯತೆಯ ಪ್ರಮಾಣ ಸುಮಾರು 44,550 ಮಿಲಿಯನ್ ಯೂನಿಟ್ಟುಗಳೆಂದು ಅಂದಾಜಿಸಲಾಗಿದೆ.

ಗುಲ್ಬರ್ಗಾ ಜಿಲ್ಲೆಯೂ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಗರ ಪ್ರದೇಶಗಳಿಗೆ 20 ರಿಂದ 22 ಗಂಟೆಗಳ ಕಾಲ ಮತ್ತು ಗ್ರಾಮೀಣ

ಪ್ರದೇಶಗಳಿಗೆ 6 ಗಂಟೆಗಳ ಕಾಲ 3 ಫೇಸ್ ಮತ್ತು 6 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಇ) ಗ್ರಾಮೀಣ ಭಾಗದ ವಿದ್ಯುತ್ ಸುಧಾರಣೆಗಾಗಿ ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡುತ್ತಿದೆ.
- ಹಾಲಿ ಇರುವ ವಿದ್ಯುತ್ ಉಪ ಕೇಂದ್ರಗಳಲ್ಲಿ ಟ್ರಾನ್ಸ್ ಫಾರ್ಮರ್‌ಗಳ ಸಾಮರ್ಥ್ಯವನ್ನು ಉನ್ನತೀಕರಿಸಲಾಗುತ್ತಿದೆ.
- ಹಳೆಯ ತಂತಿಗಳನ್ನು ಬದಲಾಯಿಸಿ ಹೊಸ ತಂತಿಗಳನ್ನು ಹಾಕಲಾಗುತ್ತಿದೆ.
- ಹೊಸ ವಿದ್ಯುತ್ ಮಾರ್ಗಗಳನ್ನು ಹಾಕಲಾಗುತ್ತಿದೆ.
- ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಲಾಗುತ್ತಿದೆ.
- ವಿಶೇಷವಾಗಿ ಗ್ರಾಮೀಣ ಭಾಗದ ಸುಧಾರಣೆಗಾಗಿ 'ನಿರಂತರ ಜ್ಯೋತಿ' ಯೋಜನೆ ಜಾರಿಗೊಳಿಸಿದೆ.

ಈ) ವಿದ್ಯುತ್ ಸರಬರಾಜು ಕಂಪನಿಗಳು ಹೆಚ್ಚುವರಿಯಾಗಿ 2009–10ನೇ ಸಾಲಿನಲ್ಲಿ ಹೊಸ ಟಿ.ಸಿ.ಗಳ ಖರೀದಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿವೆ:

- ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಈಗಾಗಲೇ 1885 ಟಿ.ಸಿಗಳನ್ನು ಖರೀದಿಸಿದ್ದು ಹಾಗು ಹೊಸದಾಗಿ 470 ಟಿ.ಸಿಗಳನ್ನು ಖರೀದಿಸುವ ಪ್ರಕ್ರಿಯೆಯನ್ನು ಜಾರಿಗೊಳಿಸಿದೆ.
- ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು 4,242 ಹೊಸ ಟಿ.ಸಿ.ಗಳನ್ನು ಖರೀದಿಸಿದೆ.
- ಹುಬ್ಬಳ್ಳಿ ವಿದ್ಯುಯತ್ ಸರಬರಾಜು ಕಂಪನಿಯು 1,500 ಹೊಸ ಟಿ.ಸಿ.ಗಳ ಖರೀದಿಗೆ ಆದೇಶ ನೀಡಿರುತ್ತದೆ.
- ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಈಗಾಗಲೇ 2,666 ಟಿ.ಸಿ.ಗಳನ್ನು ಖರೀದಿಸಿದ್ದು ಹಾಗೂ ಹೊಸದಾಗಿ 3,865 ಟಿ.ಸಿಗಳ ಖರೀದಿಗಾಗಿ ಆದೇಶ ನೀಡಿರುತ್ತದೆ.

➢ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ 813 ಹೊಸ ಟಿ.ಸಿ.ಗಳನ್ನು ಖರೀದಿಸಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ವಿಫಲಗೊಂಡ ಪರಿವರ್ತಕಗಳನ್ನು ಶೀಘ್ರವಾಗಿ ಬದಲಾಯಿಸಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮ ಕೈಗೊಳ್ಳುತ್ತಿವೆ.

847 ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದ ಜನ ಸಾಮಾನ್ಯರಿಗೆ ವಿದ್ಯುತ್ ಸಂಪರ್ಕವನ್ನು ಅಳವಡಿಸಲು ಬೇಕಾದ ವಿದ್ಯುತ್ ಸಾಮಗ್ರಿಗಳ ಸರಬರಾಜಿನಲ್ಲಿ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ಆಗುತ್ತಿರುವ ತೊಂದರೆ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ಮತ್ತು ಆ)

ಗ್ರಾಮೀಣ ಪ್ರದೇಶದ ಜನ ಸಾಮಾನ್ಯರಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಬೇಕಾಗಿರುವ ಎಲ್ಲಾ ಸಾಮಗ್ರಿಗಳು ಸಕಾಲದಲ್ಲಿ ಪೂರೈಕೆ ಯಾಗುತ್ತಿದ್ದು, ಅತೀ ಅವಶ್ಯಕ ಸಾಮಗ್ರಿಗಳು ಉಗ್ರಾಣದಲ್ಲಿ ಲಭ್ಯವಿರುತ್ತವೆ. ಬೇಡಿಕೆಗನುಗುಣವಾಗಿ ವಿದ್ಯುತ್ ಸಾಮಗ್ರಿಗಳನ್ನು ಪೂರೈಸಲಾಗುತ್ತಿದ್ದು, ವಿದ್ಯುತ್ ಸಂಪರ್ಕವನ್ನು ಕಲ್ಪಿಸುವಲ್ಲಿ ತೊಂದರೆಯಾಗದಂತೆ ಎಚ್ಚರವಹಿಸಲಾಗುತ್ತಿದೆ.

720 ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿ ಗಾಳಿಯಂತ್ರಗಳಿಂದ ಉತ್ಪಾದನೆಯಾಗತಕ್ಕ ವಿದ್ಯುತ್ ಪ್ರಮಾಣ ಎಷ್ಟು; (ಘಟಕವಾರು, ಸಂಸ್ಥೆವಾರು ವಿದ್ಯುತ್ ಪ್ರಮಾಣ ವಿವರ ನೀಡುವುದು);